ಆರ್.ಡಿ. ಹಣದಿಂದ ಬರುವ ಕಮಿಷನ್ ಬಗ್ಗೆ

೧೨(೨೮೪) ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪ್ರಾಥಮಿಕ ಶಾಲಾ ಶಿಕ್ಷಕರಿಂದ ವಸೂಲಿ ಮಾಡುತ್ತಿರುವ ಆರ್.ಡಿ. ಹಣದ ಕಮಿಷನ್ ಯಾರಿಗೆ ಸಲ್ಲುತ್ತದೆ ?

ಆ) ಶಿಕ್ಷಕರ ಹಣದಿಂದ ಬರುವ ಆ ಕಮಿಷನ್ ಹಣ ಶಿಕ್ಷರಿಗೆ ಉಪಯೋಗವಾಗುವಂತೆ ಏಕೆ ಮಾಡಬಾರದು ? ಹಾಗಿಲ್ಲದಿದ್ದರೆ ಅದು ಸರ್ಕಾರದ ಲೆಕ್ಕಕ್ಕೆ ಜಮಾ ಆಗುತ್ತಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಆರ್ ಡಿ. ಹಣಕ್ಕೆ ಕಮಿಷನ್ ಪ್ರಾಥಮಿಕ ಶಾಲಾ ಶಿಕ್ಷಕರಿಂದ ವಸೂಲ್ಮಾಡುತ್ತಿಲ್ಲ. ಅಂಚೆ ಇಲಾಖೆಯು ಈ ಆರ್.ಡಿ. ಖಾತೆಯ ಮೇಲೆ ನೀಡುವ ಕಮಿಷನ್ ಪ್ರೋತ್ಸಾಹದಾಯಕ ಹಣವಾಗಿದ್ದು ಸದರಿ ಹಣವು ಸಾಮಾನ್ಯವಾಗಿ ರೇಂಜಿನ ಸಹಾಯಕ ಶಿಕ್ಷಣಾಧಿಕಾರಿಗಳ ಹಾಗೂ ಅವರ ಸಹಾಯಕರಾಗಿ ಕಾರ್ಯ ನಿರ್ವಹಿಸುವ ಕಛೇರಿಯ ಗುಮಾಸ್ತರಿಗೆ ಸಲ್ಲುತ್ತಿದೆ.

ಆ) ಅಂಚೆ ಇಲಾಖೆಯು ಆರ್.ಡಿ. ಖಾತೆಯ ಮೇಲೆ ನೀಡುವ ಕಮಿಷನ್ ಪ್ರೋತ್ಸಾಹದಾಯಕ ಹಣವಾಗಿದ್ದು ಇದರ ಮೊತ್ತವು ಅಲ್ಪ ಪ್ರಮಾಣದಲ್ಲಿರುತ್ತದೆ. ಸರ್ಕಾರಿ ನೌಕರರಲ್ಲಿ ಉಳಿತಾಯ ಹವ್ಯಾಸವನ್ನು ಬೆಳೆಸುವ ಹಾಗೂ ಅವರುಗಳನ್ನು ರಾಷ್ಟ್ರೀಯ ಉಳಿತಾಯ ಯೋಜನೆಗಳಲ್ಲಿ ತೊಡಗಿಸುವ ಅಧಿಕಾರಿ ಸಿಬ್ಬಂದಿ. ಅಂಚೆ ಇಲಾಖೆಯು ನೀಡುವ ಉತ್ತೇಜಿತ ಹಣ ಈ ತರಹೆಯ ಹಣವು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡುವಂತಿಲ್ಲ.

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಮುಖ್ಯ ರಸ್ತೆ ರಿಪೇರಿ ಬಗ್ಗೆ

೧೩ (೨೨೩೨) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುಖ್ಯ ರಸ್ತೆಗಳಾದ ೧) ಚಿಕ್ಕನಾಯಕನಹಳ್ಳಿ–ಮತ್ತಿಘಟ್ಟ ರಸ್ತೆ, ೨) ಹುಳಿಯಾರು–ಬಿದರಮ್ಮನ ಗುಡಿ ರಸ್ತೆ, ೩) ಹುಳಿಯಾರು ಬಾಣಾವರ, ರಸ್ತೆಗಳು ಪ್ರಯಾಣಕ್ಕೆ ಯೋಗ್ಯವಲ್ಲದ ರೀತಿಯಲ್ಲಿ ಕೆಟ್ಟುಹೋಗಿದ್ದು ಇವುಗಳ ದುರಸ್ತಿ ಮತ್ತು ಡಾಂಬರು ಹಾಕಿಸುವ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ಮನವಿ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಈವರೆವಿಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ವಿದ್ಯುಚ್ಛಕ್ತಿ ನೀರಾವರಿ ಸಚಿವರು).—

ಅ) ಹೌದು, ಮನವಿಗಳು ಬಂದಿವೆ.

ಆ) ಮೇಲಿನ ೩ ರಸ್ತೆಗಳ ಬಗ್ಗೆ ಈ ರೀತಿ ಕ್ರಮ ಕೈಗೊಳ್ಳಲಾಗಿದೆ.

೧) ಚಿಕ್ಕನಾಯಕನಹಳ್ಳಿ–ಮತ್ತಿಘಟ್ಟ ರಸ್ತೆ: ದೊರಕುತ್ತಿರುವ ವಾರ್ಷಿಕ ಅನುದಾನಕ್ಕನುಗುಣವಾಗಿ, ಆಗಿಂದಾಗ್ಗೆ ದುರಸ್ತಿ ಕೆಲಸಗಳನ್ನು ಕೈಗೊಂಡು ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ಪ್ರಯತ್ನಿಸಲಾಗುತ್ತಿದೆ.

೨) ಬಿದರಮ್ಮನ ಗುಡಿ–ಹುಳಿಯಾರು ರಸ್ತೆ : ಈ ರಸ್ತೆಯ ಭಾಗಗಳ ಅಭಿವೃದ್ಧಿ ೮೬–೮೭ನೇ ಸಾಲಿನಲ್ಲಿ ೫೫ ಲಕ್ಷ ರೂಪಾಯಿ ಅಂದಾಜಿಗೆ ಮಂಜೂರಾತಿ ನೀಡಲಾಗಿದ್ದು, ಕೆಲಸವನ್ನು ನಿಯಮಾವಳಿಗನುಸಾರವಾಗಿ ಪ್ರಾರಂಭಿಸಲಾಗುವುದು. ಇದಲ್ಲದೆ ದುರಸ್ತಿಯ ಅನುದಾನಲ್ಲಿಯೂ ಸಹ ಕೆಲಸಗಳನ್ನು ಕೈಕೊಂಡು ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಪ್ರಯತ್ನಿಸಲಾಗುತ್ತಿದೆ.

ಬಿ) ಹುಳಿಯೂರ್ ಬಾಣಾವಾರ ರಸ್ತೆ : ದೊರಕುತ್ತಿರುವ ವಾರ್ಷಿಕ ಅನುದಾನದಲ್ಲಿ ದುರಸ್ತಿ ಕೆಲಸಗಳನ್ನು ಕೈಗೊಂಡು ರಸ್ತೆಯನ್ನು ಸುಸ್ಥಿತಿಯಡಲು ಪ್ರಯತ್ನಿಸಲಾಗುತ್ತಿದೆ.

೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ನಮೂದಿಸಿರುವ ಏತ ನೀರಾವರಿ ಯೋಜನೆಗಳ ಬಗ್ಗೆ

೧೪ (೧೯೨) ಶ್ರೀ ಕೆ. ಬಿ. ಕೋಳಿವಾಡ (ರಾಣೆ ಬೆನ್ನೂರು).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಎ) ೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಕಾಣಿಸಲಾದ ಏತಾ ನೀರಾವರಿ ಯೋಜನೆಗಳಲ್ಲಿಯೇ ಮೆಡ್ಲೇರಿ ಏತಾ ನೀರಾವರಿ ಯೋಜನೆಗೆ ಆದ್ಯತೆ ಕೊಟ್ಟು ಪ್ರಾರಂಭಿಸಲು ಸ್ಥಳೀಯ ಶಾಸಕರು ಮನವಿ ಸಲ್ಲಿಸಿರುವರೇ ?

ಬಿ) ಹಾಗಿದ್ದಲ್ಲಿ, ಸದರಿ ಕಾರ್ಯಕ್ರಮವು ಇನ್ನೂ ಏಕೆ ಪ್ರಾರಂಭಗೊಂಡಿಲ್ಲ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಮತ್ತು ನೀರಾವರಿ ಮಂತ್ರಿಗಳು).—

ಎ) ಹೌದು.

ಬಿ) ಈ ಕಾಮಗಾರಿಯು ೧೯೮೬-೮೭ರ ಆಯವ್ಯಯದಲ್ಲಿ ಕೈಬಿಡಲ್ಪಟ್ಟಿದ್ದು ೫೦,೦೦೦ ರೂ. ಗಳ ಅನುದಾನವನ್ನು ಪಡೆದಿದೆ. ಈ ಕಾಮಗಾರಿಯ ಅಂದಾಜು ಪಟ್ಟಿಯು ತಯಾರಾಗುತ್ತಿದ್ದು, ಈ ಕೆಲಸವು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕಾರ್ಯಸಾಧುವೆಂದು ಕಂಡು ಬಂದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಯಸ್ಕರ ಶಿಕ್ಷಣ ಪದ್ಧತಿಯನ್ನು ಜನಪ್ರಿಯಗೊಳಿಸುವ ಬಗ್ಗೆ

೧೫ (೨೧೧ಎ) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಎ) 'ವಯಸ್ಕರ ಶಿಕ್ಷಣ' ಸರ್ಕಾರದ ಅಪೇಕ್ಷೆಗೆ ತಕ್ಕಂತೆ ಫಲಪ್ರದವಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಬಿ) ಈ ಯೋಜನೆಯನ್ನು ಇನ್ನೂ ಹೆಚ್ಚು ಫಲಪ್ರದಗೊಳಿಸಲು ಸರ್ಕಾರದವರು ಬೇರೆ ಏನಾದರೂ ಹೆಚ್ಚಿನ ಸೌಲಭ್ಯ ಅಲ್ಲಿಯ ಶಿಕ್ಷಕ ಶಿಕ್ಷಕಿಯರಿಗೆ ಕೊಡಲು ಯೋಜಿಸಿದ್ದಾರೆಯೆ ?

ಇ) ಅನಕ್ಷರಸ್ಥರನ್ನು ಈ ಯೋಜನೆಯಡಿಯಲ್ಲಿ ತರಲು ಹೊಸ ಪ್ರಯತ್ನ ಏನಾದರೂ ನಡೆದಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಎ) ಇಲ್ಲ.

ಬಿ) ಇಲ್ಲ.

ಇ) ನಡೆದಿದೆ.

ಗ್ಯಾಂಗ್ ಕೂಲಿಗಾರರ ವೇತನ ಪುನರ್ ವಿಮರ್ಶೆ ಬಗ್ಗೆ

೧೫ (೨೧೧) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಎ) ರಾಜ್ಯದಲ್ಲಿ ಗ್ಯಾಂಗ್ ಕೂಲಿಗಾರರು ಮತ್ತಿತರ ಕಾರ್ಮಿಕರಿಗೆ ಕೊಡುತ್ತಿರುವ ಕನಿಷ್ಠ ವೇತನ(ಕೂಲಿ) ಎಷ್ಟು ?